# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯಪಾಲಕ ಅಭಿಯಂತರರವರ ಕಛೇರಿ, ಶಿವಾಜಿನಗರ ಉಪ ವಿಭಾಗ, ಹಲಸೂರು ಕೆರೆ ರಸ್ತೆ, ಬೆಂಗಳೂರು**

ಸ.ಕಾ.ನಿ.ಅ/ಶಿನ/ವಾ92/ಪಿಆರ್/ 19 /2021-22

ದಿನಾಂಕ: 21/09/2021

## ವಾರ್ಡ್ ಸಮಿತಿ ಸಭೆಯ ಸೂಚನಾ ಪತ್ರ

**ವಿಷಯ:** ವಾರ್ಡ್ ಸಂಖ್ಯೆ: 92, ಶಿವಾಜಿನಗರ ವಾರ್ಡ್ ಸಮಿತಿಯ ಸಭೆಗೆ ಹಾಜರಾಗುವ ಬಗ್ಗೆ.

**ಉಲ್ಲೇಖ:** ಆಯುಕ್ತರವರ ಸುತ್ತೋಲೆ ಸಂಖ್ಯೆ: ಬಿ12(5)/ಪಿಆರ್/35/2020-21 ದಿನಾಂಕ: 21/09/2020 ಆದೇಶದನ್ವಯ.

**************

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂದಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ:92-ಶಿವಾಜಿನಗರ ವ್ಯಾಪ್ತಿಯಲ್ಲಿ ಪ್ರತಿ ಮಾಹೆಯ ಮೊದಲನೆ ಶನಿವಾರ ಹಾಗೂ ಮೂರನೇ ಶನಿವಾರ ರಂದು ವಾರ್ಡ್ ಸಮಿತಿಯ ಸಭೆಯನ್ನು ಕಡ್ಡಾಯವಾಗಿ ಆಯೋಜಿಸಲಾಗಿ ಕಾರ್ಯಸೂಚಿಗಳಾದ ವಾರ್ಡಿನ ಘನತ್ಯಾಜ್ಯ ವಿಲೆವಾರಿ, ಬೀದಿ ದೀಪ ನಿರ್ವಹಣೆ, ಮಳೆಯಿಂದ ಉಂಟಾಗಿರುವ ರಸ್ತೆ ಗುಂಡಿಯ ನಿರ್ವಹಣೆ, ರಸ್ತೆ ಅಗೆತಗಳ ಬಗ್ಗೆ, ಕೋವಿಡ್-19ರ ಸಂಬಂಧಿತ ಹಾಗೂ ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ, ಚರ್ಚಿಸಲು ಉಲ್ಲೇಖದನ್ವಯ ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರು ನಿಯೋಜಿಸಿರುವ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ವಾರ್ಡ್ ಸಮಿತಿಯ ಸಭೆ ನಡೆಸಲು ತೀರ್ಮಾನಿಸಲಾಗಿದೆ. ಈ ಕೆಳಕಂಡ ಅಧಿಕಾರಿಗಳು ತಪ್ಪದೇ ಸಭೆಗೆ ಅವಶ್ಯ ಮಾಹಿತಿಯ ದಾಖಲೆಗಳೊಂದಿಗೆ ಹಾಜರಾಗಲು ಈ ಮೂಲಕ ಕೋರಿದೆ.

**ವಂದನೆಗಳೊಂದಿಗೆ,**

**ಸಭೆಯ ಸ್ಥಳ :** **ಕಾರ್ಪೋರೇಷನ್ ವಾರ್ಡ್-92ರ ಕಛೇರಿ, ಬ್ರಾಡ್ವೇರಸ್ತೆ, ಶಿವಾಜಿನಗರ, ಬೆಂಗಳೂರು.**

**ದಿನಾಂಕ :** **23/09/2021 ಸಮಯ : ಬೆಳಿಗ್ಗೆ 11:00 ಗಂಟೆಗೆ**

**ಕಾರ್ಯದರ್ಶಿ ಮತ್ತು ಸಂಚಾಲಕರು**
**ವಾರ್ಡ್ ಸಂಖ್ಯೆ.92-ಶಿವಾಜಿನಗರ (ಪ್ರಭಾರ)**

**ರವರಿಗೆ,**

1) ಸಹ ಕಂದಾಯ ಅಧಿಕಾರಿಗಳು (ಶಿವಾಜಿನಗರ) ಉಪ ವಿಭಾಗ ರವರಿಗೆ
2) ಆರೋಗ್ಯ ವೈದ್ಯಾಧಿಕಾರಿ(ಪೂರ್ವ) ರವರಿಗೆ
3) ತೋಟಗಾರಿಕೆ ಅಧೀಕ್ಷಕರು (ಪೂರ್ವ) ರವರಿಗೆ
4) ಪೋಲೀಸ್ ಇನ್ಸ್‌ಪೆಕ್ಟರ್ ಶಿವಾಜಿನಗರ / ಪೋಲೀಸ್ ಇನ್ಸ್‌ಪೆಕ್ಟರ್ ಸಂಚಾರಿ ಶಿವಾಜಿನಗರ
5) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿದ್ಯುತ್-ಪೂರ್ವ) ವಿಭಾಗ ರವರಿಗೆ
6) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಬೆವಿಕಂ) ವಿಭಾಗ ರವರಿಗೆ
7) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ನೀರು ಸರಬರಾಜು ಮತ್ತು ಒಳಚರಂಡಿ) ವಿಭಾಗ ರವರಿಗೆ
8) ಸಹಾಯಕ ಕಂದಾಯ ಅಧಿಕಾರಿ (ಕಲ್ಯಾಣ-ಪೂರ್ವ) ರವರಿಗೆ.
9) ಕಂದಾಯ ಅಧಿಕಾರಿ (ಶಿವಾಜಿನಗರ) ವಿಭಾಗ ರವರಿಗೆ.
10) ಕಛೇರಿ ಕಡತಕ್ಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಶಿವಾಜಿನಗರ ಉಪವಿಭಾಗ ಹಲಸೂರು ಕೆರೆರಸ್ತೆ, ಬೆಂಗಳೂರು-42**

---

ಸಂಖ್ಯೆ:ಸ.ಇಂ/ವಾ-92/ವಾರ್ಡ್‌ಸಭೆ/19/ 2021-22 ದಿನಾಂಕ: 23-09-2021

## ವಾರ್ಡ್-92 ರ ವಾರ್ಡ್ ಸಭೆಯ ನಡವಳ

ದಿನಾಂಕ: 23-09-2021 ರಂದು ಶಿವಾಜಿನಗರ ಉಪ ವಿಭಾಗ ವಾರ್ಡ್-92-ಶಿವಾಜಿನಗರ ವಾರ್ಡ್ ಕಛೇರಿಯಲ್ಲಿ ಶ್ರೀಮತಿ ಖಾಜಿ ನಫೀಸಾ, ವಾರ್ಡ್-92 ರ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳ.

**ಹಾಜರಿದ್ದವರು:**

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಪದನಾಮ / ಇಲಾಖೆ |
|---|---|---|
| 1 | ಶ್ರೀಮತಿ ಖಾಜಿ ನಫೀಸಾ | ನೋಡಲ್ ಅಧಿಕಾರಿ ಮತ್ತು ಸಹಾಯಕ ಆಯುಕ್ತರು ಆಡಳಿತ ಬಿ.ಬಿ.ಎಂ.ಪಿ |
| 2 | ಶ್ರೀ.ಸೈಫುದ್ದೀನ್ | ಸ.ಕ.ಅ(ಶಿವಾಜಿನಗರ) |
| 3 | ಶ್ರೀ. ಪ್ರವೀಣ್.ಎನ್.ಎಂ | ಸಅ ಹಾಗೂ ಕಾರ್ಯದರ್ಶಿ ಮತ್ತು ಸಂಚಾಲಕರು ವಾರ್ಡ್ ಸಂಖ್ಯೆ:92(ಪ್ರಭಾರ) |
| 4 | ಶ್ರೀ.ವೆಂಕಟೇಶ್ | ಹಿರಿಯ ಆರೋಗ್ಯ ಪರಿವೀಕ್ಷಕರು |

**ಮಾನ್ಯ ನೋಡಲ್ ಅಧಿಕಾರಿರವರ ಸ್ವಾಗತದೊಂದಿಗೆ ಅಧಿಕಾರಿಗಳ / ಹಾಜರಿದ್ದ ವರ ಪರಸ್ಪರ ಪರಿಚಯದೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.**

1) **ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ**:- ಶಿವಾಜಿನಗರ ಉಪ ವಿಭಾಗದ ವಾರ್ಡ್ ಸಂಖ್ಯೆ:92 ರ ವ್ಯಾಪ್ತಿಯಲ್ಲಿ ನೋಡಲ್ ಅಧಿಕಾರಿಯವರಾದಂತಹ ಶ್ರೀಮತಿ. ಖಾಜಿ ನಫೀಸಾ ರವರು ಅಲ್ಲಿ ನೇರೆದಿರುವಂತಹ ಅಧಿಕಾರಿಗಳೊಂದಿಗೆ ಕುರಿತು ಕೋವಿಡ್‌ಗೆ ಸಂಬಂಧಪಟ್ಟ ವಿಷಯ ಮತ್ತು ಅದರಿಂದಾಗುವ ಪರಿಣಾಮಗಳ ಬಗ್ಗೆ ಕುರಿತು ಚರ್ಚಿಸಿದರು.

2) ನೋಡಲ್ ಅಧಿಕಾರಿ ರವರಾದ ಶ್ರೀಮತಿ ಖಾಜಿ ನಫೀಸಾ ರವರು ವ್ಯಾಕ್ಸಿನೇಷನ್ ಕುರಿತು ಸಂಪೂರ್ಣ ಮಾಹಿತಿಯನ್ನು ಪಡೆದು ಮತ್ತು ಇನ್ನು ಲಸಿಕೆಯ ಬಗ್ಗೆ ಪ್ರಚಾರ ನಡೆಸಿ ಲಸಿಕೆಯ ಪ್ರಮಾಣ ಹೆಚ್ಚಿಸುವ ಬಗ್ಗೆ ಕ್ರಮ ಕೈಗೊಳ್ಳಲು ಆರೋಗ್ಯ ವೈಧ್ಯಾಧಿಕಾರಿರವ ರಿಗೆ ಮತ್ತು ಹಿರಿಯ ಆರೋಗ್ಯ ಪರಿವೀಕ್ಷಕರವರಿಗೆ ಸೂಚಿಸಿದರು.

   ಕ್ರಮ: ಆರೋಗ್ಯ ವೈಧ್ಯಾಧಿಕಾರಿಗಳು (ಶಿವಾಜಿನಗರ)

3) ನೋಡಲ್ ಅಧಿಕಾರಿ ರವರಾದ ಶ್ರೀಮತಿ ಖಾಜಿ ನಫೀಸಾ ರವರು ಮಾತಾನಾಡುತ್ತ ಜನಪೀಡಿತ ಪ್ರದೇಶಗಳಲ್ಲಿ ಸ್ಯಾನಿಟೈಸೇಷನ್, ಮಾಡುತ್ತಿರುವ ಬಗ್ಗೆ ಹಿರಿಯ ಆರೋಗ್ಯ ಪರಿವೀಕ್ಷಕರು ರವರಿಂದ ಮಾಹಿತಿ ಪಡೆದು ಇದರ ಬಗ್ಗೆ ಇನ್ನು ಹೆಚ್ಚು ನೀಗಾವಹಿಸಿ ಸ್ಯಾನಿಟೈಸೇಷನ್ ಅತಿ ಹೆಚ್ಚು ಪ್ರಮಾಣದಲ್ಲಿ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ. ಹಾಗೂ ಕ್ರಮ ಕೈಗೊಂಡ ಬಗ್ಗೆ ಮತ್ತು ಅದರ ಛಾಯಾಚಿತ್ರಗಳು ಮತ್ತು ಯಾಕ್ಷನ್ ಪ್ಲಾನ್ ಗ್ರೂಪ್‌ಗಳಲ್ಲಿ ಶೇರ್ ಮಾಡಲು ತಿಳಿಸಿರುತ್ತಾರೆ.

ಕ್ರಮ: ಹಿರಿಯ ಆರೋಗ್ಯ ಪರಿವೀಕ್ಷಕರು/ ಆರೋಗ್ಯ ವೈಧ್ಯಾಧಿಕಾರಿ ಶಿವಾಜಿನಗರ

4) ಶ್ರೀಮತಿ. ಖಾಜಿ ನಫೀಸಾ (ನೋಡಲ್ ಅಧಿಕಾರಿ) ರವರು ಮಾತನಾಡುತ್ತ ಆರೋಗ್ಯ ವೈಧ್ಯಾಧಿಕಾರಿ (ಶಿವಾಜಿನಗರ) ರವರು ಗೈರು ಹಾಜರಾಗಿದ್ದು, ಮುಂದಿನ ವಾರ್ಡ್ ಸಭೆಯಲ್ಲಿ ತಪ್ಪದೆ ಹಾಜರಿರಲು ಸೂಚಿಸಿರುತ್ತಾರೆ.

ಕ್ರಮ : ಆ.ವೈ.(ಶಿನ)

5) ಶ್ರೀಮತಿ. ಖಾಜಿ ನಫೀಸಾ (ನೋಡಲ್ ಅಧಿಕಾರಿ) ರವರು ಮಾತನಾಡುತ್ತ ಸ.ಕಾ.ನಿ.ಅ (ಘನತ್ಯಾಜ್ಯ ನಿರ್ವಹಣೆ) ರವರು ಗೈರು ಹಾಜರಾಗಿದ್ದು, ಮುಂದಿನ ವಾರ್ಡ್ ಸಭೆಯಲ್ಲಿ ತಪ್ಪದೆ ಹಾಜರಿರಲು ಸೂಚಿಸಿರುತ್ತಾರೆ.

ಕ್ರಮ: ಸ.ಕಾ.ನಿ.ಅ( ಘ.ನಿ) ಶಿವಾಜಿನಗರ

6) ಶ್ರೀಮತಿ. ಖಾಜಿ ನಫೀಸಾ (ನೋಡಲ್ ಅಧಿಕಾರಿ) ರವರು ಮಾತನಾಡುತ್ತ ಸಹಾಯಕ ಕಂದಾಯ ಅಧಿಕಾರಿ (ಶಿವಾಜಿನಗರ) ರವರು ಗೈರು ಹಾಜರಾಗಿದ್ದು, ಮುಂದಿನ ವಾರ್ಡ್ ಸಭೆಯಲ್ಲಿ ತಪ್ಪದೆ ಹಾಜರಿರಲು ಸೂಚಿಸಿರುತ್ತಾರೆ.

ಕ್ರಮ: ಸ.ಕಾ,ಅ(ಶಿನ)

7) ಶ್ರೀಮತಿ. ಖಾಜಿ ನಫೀಸಾ (ನೋಡಲ್ ಅಧಿಕಾರಿ) ರವರು ಸಹಾಯಕ ಕಾರ್ಯಪಾಲಕ ಅಭಿಯಂತರರು (BWSSB) ರವರು ಗೈರು ಹಾಜರಾಗಿದ್ದು, ಮುಂದಿನ ವಾರ್ಡ್ ಸಭೆಯಲ್ಲಿ ತಪ್ಪದೆ ಹಾಜರಿರಲು ಸೂಚಿಸಿರುತ್ತಾರೆ.

ಕ್ರಮ: ಸ.ಕಾ.ನಿ.ಅ (BWSSB)

8) ಶ್ರೀಮತಿ. ಖಾಜಿ ನಫೀಸಾ (ನೋಡಲ್ ಅಧಿಕಾರಿ) ರವರು ಸಹಾಯಕ ಕಾರ್ಯಪಾಲಕ ಅಭಿಯಂತರರು (BESCOM) ರವರು ಗೈರು ಹಾಜರಾಗಿದ್ದು, ಮುಂದಿನ ವಾರ್ಡ್ ಸಭೆಯಲ್ಲಿ ತಪ್ಪದೆ ಹಾಜರಿರಲು ಸೂಚಿಸಿರುತ್ತಾರೆ.

ಕ್ರಮ: ಸ,ಕಾ.ನಿ.ಅ (BESCOM)

9) ಶ್ರೀಮತಿ. ಖಾಜಿ ನಫೀಸಾ (ನೋಡಲ್ ಅಧಿಕಾರಿ) ರವರು ಮಾತನಾಡುತ್ತ ವಾರ್ಡ್ ಡೆವಲಪ್‌ಮೆಂಟ್ ಸಿವಿಲ್ ಕಾಮಗಾರಿಗಳ ಬಗ್ಗೆ ಮುಂದಿನ ವಾರ್ಡ್ ಸಭೆಯಲ್ಲಿ ಯಾಕ್ಷನ್ ಪ್ಲಾನ್ ತಯಾರಿಸಿ ನೀಡಲು ಕೋರಿರುತ್ತಾರೆ.

ಕ್ರಮ: ಸ.ಕಾ.ನಿ.ಅ(ಶಿನ)

10) ಅಂತಿಮವಾಗಿ ನೋಡಲ್ ಅಧಿಕಾರಿರವರು ಮಾತನಾಡಿ ಕೋವಿಡ್-19 ಹೆಚ್ಚುವ ಸಾಧತೆಯಿದ್ದು, ಇದರ ಬಗ್ಗೆ ಇನ್ನು ಹೆಚ್ಚು ಜಾಗ್ರತೆವಹಿಸಬೇಕಾಗಿರುತ್ತದೆ. ಹಾಗೂ ವಾರ್ಡ್-92 ಶಿವಾಜಿನಗರ ಇಲ್ಲ ಕಮರ್ಷಿಯಲ್ ಯಸ್ಟಬ್ಲಿಶ್‌ಮೆಂಟ್ ವಹಿವಾಟುಗಳು ಹೆಚ್ಚು ಇರುವುದರಿಂದ ಜನರಿಗೆ ಸೋಷಿಯಲ್ ಡಿಸ್ಟೆನ್ಸಿಂಗ್, ಸ್ಯಾನಿಟೈಸೇಷನ್ ಮತ್ತು ವ್ಯಾಕ್ಸಿನೇಷನ್ ಬಗ್ಗೆ ಪ್ರಚಾರ್ ನಡೆಸಿ ಜನರಲ್ಲಿ ಜಾಗ್ರತಿ ಮೂಡಿಸಲು ತಿಳಿಸಿರುತ್ತಾರೆ.

ಕಾರ್ಯದರ್ಶಿಯವರು ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಪ್ರಕಾಶ್.ಎಸ್.ಎಂ)

ಸ.ಅ ಮತ್ತು ಕಾರ್ಯದರ್ಶಿ
ವಾರ್ಡ್ ಸಂ:92 ( ಪ್ರಭಾರ)